# ನಿಮ್ಮೊಡನೆ

## ಬಂದ್‌ಗಳಿಗೆ ಕೊನೆ ಎಂದು?

ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹವನ್ನು ಅಹಿಂಸಾತ್ಮಕ ಅಸ್ತ್ರವಾಗಿ ಮೊಟ್ಟಮೊದಲ ಸಲಕ್ಕೆ ಪ್ರಯೋಗಿಸಿದ ಮಹಾತ್ಮ ಗಾಂಧಿ ಅವರು ಕೂಡ ಈಗಿನ ರಾಜಕೀಯ ಪಕ್ಷಗಳು ತಮ್ಮ ಆಕ್ರೋಶದ ಅಭಿವ್ಯಕ್ತಿಗೆ ನೀಡುತ್ತಿರುವ ಬಂದ್ ಕರೆಯನ್ನು ಖಂಡಿತ ಒಪ್ಪುತ್ತಿರಲಿಲ್ಲ. ಅದರಲ್ಲಿಯೂ ಆಡಳಿತ ಸೂತ್ರವನ್ನು ಹಿಡಿದಿರುವ ರಾಜಕೀಯ ಪಕ್ಷಗಳೇ ಸಾರ್ವಜನಿಕ ಜೀವನವನ್ನು ಸ್ತಬ್ಧಗೊಳಿಸುವ ಕ್ರಮ ಕೈಗೊಳ್ಳುತ್ತಿರುವುದನ್ನು ಅವರು ಒಪ್ಪುತ್ತಿರಲಿಲ್ಲ ಮಾತ್ರವಲ್ಲ, ಇಂಥ ಅಧಿಕಾರ ದುರುಪಯೋಗದ ಕ್ರಮಗಳಿಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ತಾವೇ ನಿರಾಹಾರ ವ್ರತವನ್ನು ಆಚರಿಸುತ್ತಿದ್ದರೇನೋ. ಏಕೆಂದರೆ ಸರ್ಕಾರವೇ ಬೆಂಬಲಿಸಿದ ಬಂದ್ ಆಚರಣೆ ಸಾರ್ವಜನಿಕರ ಒಂದು ದಿನದ ಬದುಕನ್ನು ನಿಯಂತ್ರಿಸುತ್ತದೆ. ದುಡಿಮೆಯಿಂದಲೇ ನಿತ್ಯದ ಆಹಾರವನ್ನು ಹುಟ್ಟಿಸಿಕೊಳ್ಳುವ ಅಸಂಖ್ಯಾತ ಜನರ ಬದುಕುವ ಹಕ್ಕಿಗೆ ಧಕ್ಕೆ ತರುತ್ತದೆ. ದಿನದ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದ ವಿವಿಧ ಜನವರ್ಗಗಳ ಜೀವನದ ಹಳಿಯನ್ನು ಅವರಿಗೆ ಯಾವುದರಲ್ಲಿಯೂ ಸಂಬಂಧಪಡದ ವಿಷಯಕ್ಕಾಗಿ ತಪ್ಪಿಸಿ ನಷ್ಟವುಂಟು ಮಾಡುತ್ತದೆ.

ಬಂದ್‌ಗಳಿಂದ ಆಗುವ ನಷ್ಟಪರಂಪರೆಯನ್ನು ಮನಗಂಡ ಭಾರತೀಯ ನ್ಯಾಯ ವ್ಯವಸ್ಥೆ ಸಮಯ ಸಂದರ್ಭಗಳು ಸಿಕ್ಕಿದಾಗಲೆಲ್ಲ ಈ ಪ್ರವೃತ್ತಿಯನ್ನು ಖಂಡಿಸಿದೆ. ಕೇರಳ ಹೈಕೋರ್ಟು ಅಲ್ಲಿ ಕರೆದಿದ್ದ ಬಂದ್ ಕಾನೂನು ಬಾಹಿರ ಎಂದು ನೀಡಿದ ತೀರ್ಪನ್ನು ದೇಶದ ಸರ್ವೋಚ್ಛ ನ್ಯಾಯಾಲಯ ಎತ್ತಿಹಿಡಿದಿದೆ. ಮುಂಬೈ ಹೈಕೋರ್ಟ್ ಅಂತೂ ಬಂದ್ ಕರೆ ನೀಡಿದ ರಾಜಕೀಯ ಪಕ್ಷಗಳಿಗೆ ಜುಲ್ಮಾನೆಯನ್ನೂ ವಿಧಿಸಿದೆ. ಬಂದ್ ಕರೆ 'ಕಾನೂನುಬಾಹಿರ' ಎಂದು ನ್ಯಾಯಾಲಯಗಳು ಸ್ಪಷ್ಟಮಾತುಗಳಲ್ಲಿ ತೀರ್ಪು ನೀಡಿವೆ. ಆದರೂ ರಾಜಕೀಯ ಪಕ್ಷಗಳು ಬಂದ್ ಮಾಡಿಸಿ ತಮ್ಮ ರಾಜಕೀಯ ಲಾಭ ಮಾಡಿಕೊಳ್ಳುವುದನ್ನು ಬಿಟ್ಟಿಲ್ಲ. ಕಾನೂನು ಅವಕಾಶಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚುವ ದುಷ್ಟ ಪ್ರವೃತ್ತಿಯನ್ನೂ ಬೆಳೆಸಿಕೊಂಡಿರುವ ರಾಜಕೀಯ ಪಕ್ಷಗಳು ಬಲವಂತವಾಗಿ ಹೇರಲಾದ ಬಂದ್‌ಗೆ 'ಜನರ ಸ್ವಯಂಪ್ರೇರಣೆಯ ಪ್ರತಿಭಟನೆ' ಎಂಬ ತಿರುವನ್ನು ಕೊಡಲು ಪ್ರಯತ್ನಿಸಿವೆ. ಮುದ್ರಣ ಮಾಧ್ಯಮಗಳಲ್ಲಿ ಇಂಥ ತಿರುವಿಗೆ ಬೇರೆ ಬೇರೆ ಕಾರಣಗಳಿಂದ ಮನ್ನಣೆ ಸಿಗಬಹುದಾದರೂ ನೇರ ದೃಶ್ಯಗಳಿಂದ ಬಂದ್ ಆಚರಣೆಯನ್ನು ಜನರ ಮುಂದೆ ಯಥಾವತ್ತಾಗಿ ಪ್ರಸಾರ ಮಾಡುವ ಎಲೆಕ್ಟ್ರಾನಿಕ್ ಮಾಧ್ಯಮಗಳಿಂದ ಸತ್ಯವನ್ನು ಮರೆಮಾಚಲು ಸಾಧ್ಯವಾಗುವುದಿಲ್ಲ. ಬಂದ್ ಆಚರಣೆ ವೇಳೆ ರಾಜಕೀಯ ಪಕ್ಷಗಳ ಕಾರ್ಯಕರ್ತರು ಬಂದ್ ನಡೆಸಲು ಬಲವಂತಪಡಿಸುತ್ತಿರುವ ದೃಶ್ಯಗಳು ನ್ಯಾಯಾಲಯದ ಪರಿಶೀಲನೆಗೆ ಒಳಪಟ್ಟರೆ ಬಂದ್ ಎಂಬ ಪ್ರತಿಭಟನೆ ಸ್ವಯಂ ಪ್ರೇರಣೆಯದೋ, ಆಡಳಿತ ವ್ಯವಸ್ಥೆಯೇ ಹೇರಿದ್ದೋ ಎಂಬುದು ಬಯಲಾಗುತ್ತದೆ.

ಪ್ರಜಾಸತ್ತೆಯಲ್ಲಿ ಜನ ತಮ್ಮ ಜೀವ ಮತ್ತು ಆಸ್ತಿಪಾಸ್ತಿಗಳ ಸುರಕ್ಷತೆಗಾಗಿ ಕಾನೂನು ವ್ಯವಸ್ಥೆಯಲ್ಲಿ ನಂಬಿಕೆ ಇಡುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ನಂಬಿಕೆಯನ್ನು ತಮ್ಮ ಆಯ್ಕೆಯ ಮೂಲಕ ವ್ಯಕ್ತಪಡಿಸುತ್ತಾರೆ. ಜನತೆಯಿಂದ ಹೀಗೆ ದತ್ತವಾಗಿ ಪಡೆದ ಅಧಿಕಾರವನ್ನು ಅವರಿಗೆ ಭದ್ರತೆ ಮತ್ತು ಇನ್ನಿತರ ಅನುಕೂಲಗಳನ್ನು ಕಲ್ಪಿಸಲು ಅಧಿಕಾರ ಪಡೆದ ವ್ಯಕ್ತಿಗಳು ಮಾಡಬೇಕಿರುತ್ತದೆ. ಇದು ಪ್ರಜಾಸತ್ತೆಯ ಆದರ್ಶ. ಆದರೆ ಜನತೆ ನೀಡಿದ ಅಧಿಕಾರವನ್ನು ಸ್ವಂತಕ್ಕಾಗಿ, ದುರ್ಬಳಕೆ ಮಾಡಿಕೊಂಡ ವ್ಯಕ್ತಿಗಳನ್ನು ದೇಶದ ಕಾನೂನಿನ ಅನ್ವಯ ವಿಚಾರಣೆಗೆ ಒಳಪಡಿಸುವ ಸಂದರ್ಭ ಏರ್ಪಟ್ಟರೆ ಅದಕ್ಕೆ ಜನರೇಕೆ ಸ್ವಯಂ ಪ್ರೇರಣೆಯಿಂದ ಪ್ರತಿಭಟನೆ ದಾಖಲಿಸಬೇಕು? ಭಾರತೀಯ ದಂಡ ಸಂಹಿತೆಯ ಕಲಂ 120ಬಿ, 406, 420, 463, 465, 468, 471(ಇವು ಅನುಕ್ರಮವಾಗಿ ಕ್ರಿಮಿನಲ್ ಪಿತೂರಿ, ವಿಶ್ವಾಸದ್ರೋಹ, ಸುಳ್ಳುದಾಖಲೆಗಳ ಸೃಷ್ಟಿ, ಕಾನೂನುಬಾಹಿರ ಉಡುಗೊರೆ ಸ್ವೀಕಾರ, ಸಾರ್ವಜನಿಕ ಸೇವೆಯಲ್ಲಿದ್ದುಕೊಂಡು ದುಬಾರಿ ವಸ್ತುಗಳನ್ನು ಪಡೆಯುವುದು, ಆದಾಯಕ್ಕೆ ಮಿಗಿಲಾದ ಆಸ್ತಿ ಮಾಡಿರುವುದು ಇತ್ಯಾದಿ) ಅನ್ವಯ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡುವಂಥ ಆರೋಪಗಳು ಜನಪ್ರತಿನಿಧಿಯ ವಿರುದ್ಧ ದಾಖಲೆ ಸಹಿತ ಬಹಿರಂಗವಾದರೆ ಈ ಪ್ರಕ್ರಿಯೆಗೆ ಸಾಮಾನ್ಯ ಜನರೇಕೆ ವಿರೋಧಿಸಬೇಕು?

ಪ್ರಜಾಸತ್ತೆಯಲ್ಲಿ ಸಾಮಾನ್ಯ ಜನತೆ ಚುನಾವಣೆಯ ಸಂದರ್ಭದಲ್ಲಿ ಮಾತ್ರ ಲೆಕ್ಕಕ್ಕೆಬರುತ್ತಾರೆ. ರಾಜಕೀಯ ಪಕ್ಷಗಳಿಗೆ ಜನರೆಂದರೆ ಮತಗಳು ಎಂಬುದಷ್ಟೆ. ಸಂವಿಧಾನದ ಮೇಲೆ ಪ್ರಮಾಣ ಮಾಡಿ ಅಧಿಕಾರ ಹಿಡಿಯುವವರು ಅದನ್ನು ಉಲ್ಲಂಘಿಸುತ್ತಲೇ ಜನರ ಬದುಕಿನ ಜೊತೆ ಚೆಲ್ಲಾಟ ಆಡುತ್ತಿದ್ದರೆ ಅಂಥ ದುರ್ನಡತೆಯನ್ನು ದುಬಾರಿ ಶಿಕ್ಷೆ ಮತ್ತು ದಂಡದಿಂದ ನಿಗ್ರಹಿಸುವ ಸಾಮರ್ಥ್ಯ ನ್ಯಾಯಾಂಗಕ್ಕಿದೆ. ವಿಧಾಯಕ ಕ್ರಮಗಳಿಂದ ಬಲಗೊಳ್ಳಬೇಕಾದ ಪ್ರಜಾಪ್ರಭುತ್ವ ಶಿಕ್ಷೆಯ ಭೀತಿಯಲ್ಲಿ ಸಾಗಬೇಕಾಗಿರುವುದು ಸದ್ಯದ ಸ್ಥಿತಿ.

■ ಲಕ್ಷ್ಮಣ ಕೊಡಸೆ

ಪ್ರಜಾಸತ್ತೆಯಲ್ಲಿ ಜನ ತಮ್ಮ ಜೀವ ಮತ್ತು ಆಸ್ತಿಪಾಸ್ತಿಗಳ ಸುರಕ್ಷತೆಗಾಗಿ ಕಾನೂನು ವ್ಯವಸ್ಥೆಯಲ್ಲಿ ನಂಬಿಕೆ ಇಡುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ನಂಬಿಕೆಯನ್ನು ತಮ್ಮ ಆಯ್ಕೆಯ ಮೂಲಕ ವ್ಯಕ್ತಪಡಿಸುತ್ತಾರೆ. ಜನತೆಯಿಂದ ಹೀಗೆ ದತ್ತವಾಗಿ ಪಡೆದ ಅಧಿಕಾರವನ್ನು ಅವರಿಗೆ ಭದ್ರತೆ ಮತ್ತು ಇನ್ನಿತರ ಅನುಕೂಲಗಳನ್ನು ಕಲ್ಪಿಸಲು ಅಧಿಕಾರ ಪಡೆದ ವ್ಯಕ್ತಿಗಳು ಮಾಡಬೇಕಿರುತ್ತದೆ. ಇದು ಪ್ರಜಾಸತ್ತೆಯ ಆದರ್ಶ. ಆದರೆ ಜನತೆ ನೀಡಿದ ಅಧಿಕಾರವನ್ನು ಸ್ವಂತಕ್ಕಾಗಿ, ದುರ್ಬಳಕೆ ಮಾಡಿಕೊಂಡ ವ್ಯಕ್ತಿಗಳನ್ನು ದೇಶದ ಕಾನೂನಿನ ಅನ್ವಯ ವಿಚಾರಣೆಗೆ ಒಳಪಡಿಸುವ ಸಂದರ್ಭ ಏರ್ಪಟ್ಟರೆ ಅದಕ್ಕೆ ಜನರೇಕೆ ಸ್ವಯಂ ಪ್ರೇರಣೆಯಿಂದ ಪ್ರತಿಭಟನೆ ದಾಖಲಿಸಬೇಕು?

